**ಕರ್ನಾಟಕ ವಿಧಾನ ಪರಿಷತ್ತು**

ಮಾನ್ಯ ಕರ್ನಾಟಕ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ರಮೇಶ್ ಬಾಬು - ರವರು "**ಸರ್ಕಾರಿ ದಂತ ವೈದ್ಯಕೀಯ ಕಾಲೇಜು, ಬೆಂಗಳೂರು, ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ||ಚಂಪ ಜಿ. ರಾವ್, ಡಾ||ಉಜ್ಮಾ ರಿಜ್ವಿ, ಡಾ||ರಘುನಂದನ್, ಇವರುಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ 2 ವರ್ಷಗಳ ಅವಧಿಗೆ ನಿಯೋಜಿತಗೊಂಡಿರುವ ಇವರ ನಿಯೋಜನೆಯ ಅವಧಿಯು ಮುಗಿದಿದ್ದರು ಸುಮಾರು 24 ವರ್ಷಗಳಿಂದ ಸದರಿ ದಂತ ವೈದ್ಯಕೀಯ ಮೆಡಿಕಲ್ ಕಾಲೇಜಿನಲ್ಲಿಯೇ ಸೇವೆ ಸಲ್ಲಿಸುತ್ತಿದ್ದು, ಇವರುಗಳು ಬೋಧನಾ ಕಾರ್ಯನಿರ್ವಹಿಸಲು ಅರ್ಹ ವಿದ್ಯಾರ್ಹತೆಯನ್ನು ಸಹ ಹೊಂದಿರುವುದಿಲ್ಲ. ಸದರಿಯವರು ಕಾಲೇಜಿಗೆ ಸಂಬಂಧಪಡದ ವಿಷಯಗಳಲ್ಲಿ ಭಾಗವಹಿಸಿ ಕಾಲೇಜಿನ ವಾತಾವರಣವನ್ನು ಕಲುಷಿತಗೊಳಿಸುತ್ತಿರುವ ಇವರುಗಳ ಸೇವೆಯನ್ನು ಮಾತೃ ಇಲಾಖೆಗೆ ಹಿಂದಿರುಗಿಸುವ**" ವಿಷಯವಾಗಿ ಪ್ರಸ್ತಾಪಿಸಲಾದ ನಿಯಮ-72ರಡಿಯ ಗಮನ ಸೆಳೆಯುವ ಸೂಚನಾ ಪತ್ರಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ.

*********

ಡೀನ್ ಮತ್ತು ನಿರ್ದೇಶಕರು, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು, ಇವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ 05 ವರ್ಷಗಳಿಗೂ ಮೇಲ್ಪಟ್ಟ ಅವಧಿಯಿಂದ ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು, ಇಲ್ಲಿಗೆ ನಿಯೋಜನೆ ಮೇಲೆ ಸೇವೆ ಸಲ್ಲಿಸುತ್ತಿದ್ದ ಡಾ||ಪಿ. ರಘುನಂದನ್, ಹಿರಿಯ ದಂತ ಆರೋಗ್ಯಾಧಿಕಾರಿ, ಡಾ||ಚಂಪಕ ಜಿ. ರಾವ್, ಹಿರಿಯ ದಂತ ಆರೋಗ್ಯಾಧಿಕಾರಿ ಮತ್ತು ಡಾ||ಉಜ್ಮ ರಜ್ವಿ, ಹಿರಿಯ ದಂತ ಆರೋಗ್ಯಾಧಿಕಾರಿ, ಇವರುಗಳ ಸೇವೆಯನ್ನು ಮಾತೃ ಇಲಾಖೆಗೆ ಹಿಂದಿರುಗಿಸಿರುವುದನ್ನು ಪ್ರಶ್ನಿಸಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು, ಇಲ್ಲಿ ರಿಟ್ ಅರ್ಜಿ ಸಂಖ್ಯೆ : 25073-75/2017ನ್ನು ದಾಖಲಿಸಲ್ಪಟ್ಟಿರುತ್ತದೆ.

ಈ ರಿಟ್ ಅರ್ಜಿಗಳನ್ನು ದಿನಾಂಕ : 20/06/2017ರಂದು ಆಲಿಸಿದ ಮಾನ್ಯ ನ್ಯಾಯಾಲಯವು ದಿನಾಂಕ : 01/06/2017ರ ಪ್ರಶ್ನಿತ ಆದೇಶಕ್ಕೆ ತಡೆನೀಡಿ, ರಿಟ್ ಅರ್ಜಿದಾರರಾದ ಡಾ||ರಘುನಂದನ ಪಿ., ಡಾ||ಉಜ್ಮಾರಜ್ವಿ ಮತ್ತು ಡಾ||ಚಂಪಕ ಜಿ. ರಾವ್, ಇವರುಗಳ ಸೇವೆಯನ್ನು ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು, ಇಲ್ಲಿಯೇ ಮುಂದುವರೆಸಿ ನಿಯಮಿತ ವೇತನವನ್ನು ಸಂದಾಯ ಮಾಡಲು ರಿಟ್ ಅರ್ಜಿಯ 3ನೇ ಪ್ರತಿವಾದಿ ಡೀನ್ ಮತ್ತು ನಿರ್ದೇಶಕರು, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು, ಇವರಿಗೆ ಸೂಚಿಸಿತ್ತು ಹಾಗೂ ಇದನ್ನು ಪಾಲಿಸದಿರುವುದನ್ನು ಗಮನಿಸಿತು.

ಈ ನಡುವೆ ಡೀನ್ ಕಮ್ ನಿರ್ದೇಶಕರು, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು, ಇವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅಪೀಲು ಸಂಖ್ಯೆ :

4398/2017 ಮತ್ತು 4321/2017ನ್ನು ದಾಖಲಿಸಿ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ : 25073-75/2017ರಲ್ಲಿ ದಿನಾಂಕ : 16/06/2017 ಮತ್ತು 20/06/2017ಗಳಂದು ನೀಡಿರುವ ಆದೇಶವನ್ನು ಪ್ರಶ್ನಿಸಿರುತ್ತಾರೆ. ಈ ರಿಟ್ ಅಪೀಲು ಅರ್ಜಿಯನ್ನು ಪರಿಶೀಲಿಸಿದ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ : 27/02/2023ರಂದು, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಏಕ ಸದಸ್ಯ ಪೀಠವು ಪ್ರಸ್ತಾಪಿತ ರಿಟ್ ಅರ್ಜಿಗಳಲ್ಲಿ ದಿನಾಂಕ : 20/06/2017ರಂದು ನೀಡಿರುವ ಆದೇಶದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲವೆಂದು ತಿಳಿಸಿ, ಅರ್ಜಿಯನ್ನು ವಿಲೇಗೊಳಿಸಿರುತ್ತದೆ.

ರಿಟ್ ಅರ್ಜಿ ಸಂಖ್ಯೆ : 25073-75/2017ರ ಮಧ್ಯಂತರ ಆದೇಶದನ್ವಯ ಡಾ||ಪಿ. ರಘುನಂದನ್, ಹಿರಿಯ ದಂತ ಆರೋಗ್ಯಾಧಿಕಾರಿ, ಡಾ||ಚಂಪಕ ಜಿ. ರಾವ್, ಹಿರಿಯ ದಂತ ಆರೋಗ್ಯಾಧಿಕಾರಿ ಮತ್ತು ಡಾ||ಉಜ್ಮ ರಜ್ವಿ, ಹಿರಿಯ ದಂತ ಆರೋಗ್ಯಾಧಿಕಾರಿ, ಇವರುಗಳು ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು, ಇಲ್ಲಿಯೇ ಮುಂದುವರೆದಿರುತ್ತಾರೆ. ಪ್ರಸ್ತುತ ರಿಟ್ ಅರ್ಜಿಯು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿಯಿದ್ದು, ನ್ಯಾಯಾಲಯದ ಅಂತಿಮ ತೀರ್ಪಿನನ್ವಯ ಮುಂದಿನ ನಿಯಮಾನುಸಾರ ಕ್ರಮವಹಿಸಲಾಗುತ್ತದೆ.

**(ಆಕುಕ 27 ಹೆಚ್ಎಸ್‌ಡಿ 2026)**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು